# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 10 (86) |
| ಸದಸ್ಯರ ಹೆಸರು | : | ಶ್ರೀ. ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 23.02.2023 |
| ಉತ್ತರಿಸಬೇಕಾದ ಸಚಿವರು | : | ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು. |

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಘನ ತ್ಯಾಜ್ಯ ಹಾಗೂ ದ್ರವರೂಪದ ತ್ಯಾಜ್ಯದಿಂದ (Wet Waste) ಪರಿಸರದ ಮೇಲೆ ವಿಶೇಷವಾಗಿ ನಗರ ಹಾಗೂ ಪಟ್ಟಣಗಳಲ್ಲಿ ಉಂಟಾಗುತ್ತಿರುವ ಹಾನಿ, ಸಾರ್ವಜನಿಕರ ಆರೋಗ್ಯ ಮತ್ತು ಜೀವನದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವ ಬಗ್ಗೆ ಎನ್.ಜಿ.ಟಿ. ಗಂಭೀರವಾಗಿ ಪರಿಗಣಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿಯನ್ನು ನೀಡುವುದು). | ಹೌದು. ಮಾನ್ಯ ಹಸಿರು ನ್ಯಾಯಾಧೀಕರಣವು ಮೂಲ ಅರ್ಜಿ ಸಂಖ್ಯೆ 606/2018 ರಲ್ಲಿ ಪಾರಂಪರಿಕ ಘನ ತ್ಯಾಜ್ಯ ನಿರ್ವಹಣೆ, ದ್ರವ ತ್ಯಾಜ್ಯದ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿನ ಅಂತರವನ್ನು ಪರಿಗಣಿಸಿ ರೂ.2900.00 ಕೋಟಿಗಳ ಮೊತ್ತದ ಪರಿಸರ ಪರಿಹಾರವನ್ನು (environmental compensation) ವಿಧಿಸಿರುತ್ತದೆ.<br><br>**ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಮಾಹಿತಿ:**<br>• ರಾಜ್ಯದಲ್ಲಿ ತ್ಯಾಜ್ಯ ವಸ್ತುಗಳ ಉತ್ಪಾದನೆ ಹಾಗೂ ಸಂಸ್ಕರಣೆಯಲ್ಲಿರುವ ಅಂತರವನ್ನು ಅವಲೋಕಿಸಿ, ಪೂರ್ಣಪ್ರಮಾಣದಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡಲು ಅಗತ್ಯ ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳಡಿ ಅಗತ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.<br>• ರಾಜ್ಯದ ನಗರ ಪ್ರದೇಶದಲ್ಲಿ (ಬಿಬಿಎಂಪಿ ಹೊರತುಪಡಿಸಿ) ಪ್ರತಿದಿನ 6584 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, 6565 ಟಿ.ಪಿ.ಡಿ. (ಶೇ.99 ರಷ್ಟು) ಸಂಗ್ರಹಣೆಯಾಗುತ್ತಿದೆ. 5043 ಟಿ.ಪಿ.ಡಿ. ತ್ಯಾಜ್ಯ ವಿಂಗಡಣೆಯಾಗುತ್ತಿದೆ. ಹಾಗೂ ಪ್ರತಿದಿನ 3139 ಟನ್ ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ.<br>• ಸ್ವಚ್ಛ ಭಾರತ ಮಿಷನ್ 1.0 ಅಡಿ 218 ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿಬಿಎಂಪಿ ಹೊರತು ಪಡಿಸಿ) 6859 ಟನ್ ಸಾಮರ್ಥ್ಯದ ಘನ ತ್ಯಾಜ್ಯ ಸಂಸ್ಕರಣೆ ಸೌಕರ್ಯ ಅಭಿವೃದ್ಧಿಪಡಿಸುವ ಯೋಜನಾ ವರದಿಗೆ ರಾಜ್ಯ ಉನ್ನತಾಧಿಕಾರಿಗಳ ಸಮಿತಿಯು ಅನುಮೋದನೆಯನ್ನು ನೀಡಲಾಗಿರುತ್ತದೆ. ಪ್ರಸ್ತುತ 215 ನಗರಗಳಲ್ಲಿ 3163 ಟಿ.ಪಿ.ಡಿ ತ್ಯಾಜ್ಯ ನಿರ್ವಹಣೆ ಸಾಮರ್ಥ್ಯದ ಘಟಕ ಕಾರ್ಯಾಚರಣೆಯಲ್ಲಿರುತ್ತದೆ. ಉಳಿದ 3969 ಟಿ.ಪಿ.ಡಿ ಸಾಮರ್ಥ್ಯದ ತ್ಯಾಜ್ಯ ನಿರ್ವಹಣೆ ಘಟಕ ನಿರ್ಮಾಣ ಹಂತದಲ್ಲಿರುತ್ತದೆ. |

| | | |
|---|---|---|
| | | • ಸ್ವಚ್ಛ ಭಾರತ ಮಿಷನ್ 2.0 ಅಡಿ ಬಿಬಿಎಂಪಿ ಒಳಗೊಂಡಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆಯ ಪ್ರಸ್ತುತ ಸ್ಥಿತಿಗತಿಯನ್ನು ವಿಶ್ಲೇಷಿಸಿ, ಮುಂಬರುವ 5 ವರ್ಷಗಳಿಗೆ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಅಂದಾಜಿಸಿ, ಮಾರ್ಗಸೂಚಿಗಳನುಸಾರ ರೂ.2058.76/- ಕೋಟಿಗಳ ಬಂಡವಾಳ ಮೊತ್ತದ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಕೇಂದ್ರ ಹಾಗು ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.<br>• 196 ನಗರಗಳಲ್ಲಿ ಬಹಳ ವರ್ಷಗಳಿಂದ ಶೇಖರಣೆಯಾಗಿರುವ ಹಳೆ ತ್ಯಾಜ್ಯ ವಸ್ತುಗಳನ್ನು (Old dumpsite) ಗಳನ್ನು ತ್ವರಿತಗತಿಯಲ್ಲಿ ತೆರವುಗೊಳಿಸಲು (Bio-mining and Remediation) ಮಾದರಿ ಟೆಂಡರ್ ದಸ್ತಾವೇಜು, ಮಾದರಿ ಅಂದಾಜು ಪಟ್ಟಿ, ಮಾರ್ಗಸೂಚಿಗಳನ್ನು ಸಿದ್ದಪಡಿಸಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗಿರುತ್ತದೆ. ರಾಜ್ಯ ಮಟ್ಟದಲ್ಲಿ ಈಗಾಗಲೇ 4 ಕಾರ್ಯಾಗಾರಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ ಸಿಬ್ಬಂದಿಗಳಿಗೆ ಆಯೋಜಿಸಲಾಗಿರುತ್ತದೆ.<br>• 4 ಮಹಾನಗರ ಪಾಲಿಕೆಗಳಲ್ಲಿ Dumpsite Remediation ಕಾರ್ಯ ಪ್ರಗತಿಯಲ್ಲಿರುತ್ತದೆ. 5 ಮಹಾನಗರಪಾಲಿಕೆಯ ಯೋಜನಾ ವರದಿಗಳು ಸರ್ಕಾರದ ಅನುಮೋದನೆ ಹಂತದಲ್ಲಿರುತ್ತದೆ. ಉಳಿದ ನಗರ ಸ್ಥಳೀಯ ಸಂಸ್ಥೆಗಳು ಅಂದಾಜು ಪಟ್ಟಿಗಳನ್ನು ಸಿದ್ದಪಡಿಸುವ ಹಂತದಲ್ಲಿರುತ್ತದೆ.<br>• ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಆದೇಶಗಳನ್ನು ಪಾಲಿಸಲು ವಿವಿಧ ಇಲಾಖೆಗಳ ಸಮನ್ವಯ ಸಮಿತಿಯನ್ನು ರಚಿಸಿಕೊಂಡು ನಿಗದಿತ ಕಾಲಮಿತಿಯೊಳಗೆ ಘನ ಹಾಗು ದ್ರವತ್ಯಾಜ್ಯ ವಸ್ತುಗಳನ್ನು ಪೂರ್ಣಪ್ರಮಾಣದಲ್ಲಿ ಸಂಸ್ಕರಿಸಿ ವಿಲೇವಾರಿ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.<br>• ಬೆಂಗಳೂರು ನಗರದಲ್ಲಿ ಒಟ್ಟು ಐದು (ಮಂಡೂರು ಹಂತ-1 & 2, ಮಾವಳ್ಳಿಪುರ, ಬಿಂಗಿಪುರ & ಲಕ್ಷ್ಮೀಪುರ, ಬೆಳ್ಳಳ್ಳಿ, ಬಾಗಲೂರು) ಲಿಗೇಸಿ ಭೂಭರ್ತಿ ಜಾಗಗಳಿದ್ದು, ಅಂದಾಜು 97.84 ಲಕ್ಷ ಟನ್ ಲಿಗೇಸಿ ತ್ಯಾಜ್ಯವನ್ನು ಬಯೋಮೈನಿಂಗ್ ಅಥವಾ ಬಯೋರಿಮೀಡಿಯೇಷನ್ ವಿಧಾನದ ಮುಖಾಂತರ ಸಂಸ್ಕರಿಸಬೇಕಾಗಿರುತ್ತದೆ.<br>• ಐದರ ಪೈಕಿ, ಸರ್ಕಾರವು ಈಗಾಗಲೇ ಮಂಡೂರು (ಹಂತ-1) ಲಿಗೇಸಿ ಭೂಭರ್ತಿ ಜಾಗದಲ್ಲಿ ರೂ.87.00 |

ಕೋಟಿಗಳ ವೆಚ್ಚದಲ್ಲಿ ಬಯೋಮೈನಿಂಗ್ ವಿಧಾನದ ಸಂಸ್ಕರಣ ಕಾರ್ಯಕ್ಕೆ ಅನುಮೋದನೆ ನೀಡಿದ್ದು, ಕಾರ್ಯವು ಪ್ರಾರಂಭವಾಗಿರುತ್ತದೆ. ಬೆಳ್ಳಳ್ಳಿ ಲಿಗೇಸಿ ಭೂಭರ್ತಿ ಜಾಗದಲ್ಲಿ ರೂ.37.00 ಕೋಟಿಗಳ ವೆಚ್ಚದಲ್ಲಿ (ಕೆಪೆಕ್ಸ್) ಬಯೋರಿಮೀಡಿಯೇಷನ್ ವಿಧಾನದ ಮುಖಾಂತರ ಸಂಸ್ಕರಣವನ್ನು ಕೈಗೊಳ್ಳಲು ಟೆಂಡರ್ ಕರೆದು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

- ಇನ್ನುಳಿದ (ಮಂಡೂರು ಹಂತ-2, ಮಾವಳ್ಳಿಪುರ, ಬಿಂಗಿಪುರ & ಲಕ್ಷ್ಮೀಪುರ, ಬಾಗಲೂರು) ಲಿಗೇಸಿ ಭೂಭರ್ತಿ ಜಾಗದಲ್ಲಿಯೂ ತ್ವರಿತವಾಗಿ ಸಂಸ್ಕರಣವನ್ನು ಕೈಗೊಳ್ಳಲು ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಎಲ್ಲಾ ಐದು ಲಿಗೇಸಿ ಭೂಭರ್ತಿ ಜಾಗಗಳ ಸಂಸ್ಕರಣದಿಂದ ಅಂದಾಜು 159.44 ಎಕರೆ ಭೂಮಿಯು ಉಪಯೋಗಕ್ಕಾಗಿ ಲಭ್ಯವಾಗುತ್ತದೆ.

**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಮಾಹಿತಿ**

ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರ ಅನುಷ್ಠಾನ ಮತ್ತು ಅನುಸರಣೆಗಾಗಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಹೊರಡಿಸಿದ ನಿರ್ದೇಶನದಂತೆ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಸುಭಾಷ್ ಆಡಿ, ನಿವೃತ್ತ ಮುಖ್ಯ ನ್ಯಾಯಾಧೀಶರು, ಕರ್ನಾಟಕ ಉಚ್ಛ ನ್ಯಾಯಾಲಯ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಕಾನೂನಿನ ಅವಶ್ಯಕತೆಗಳಲ್ಲಿನ ಅಂತರವನ್ನು ಗುರುತಿಸಲು ಮತ್ತು ಮಾರ್ಗದರ್ಶನ ನೀಡಲು ಸಭೆಗಳನ್ನು ಮತ್ತು ತಪಾಸಣೆಗಳನ್ನು ಮಾಡಲಾಗಿದೆ. (ವಿವರಗಳನ್ನು ಅನುಬಂಧ -1 ಮತ್ತು 2 ರಲ್ಲಿ ನೀಡಲಾಗಿದೆ).

ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರ ಜಾರಿಗಾಗಿ ಪರಿಸರ (ಸಂರಕ್ಷಣೆ) ಕಾಯ್ದೆ, 1986ರ ಅಡಿಯಲ್ಲಿ ಈ ಕೆಳಕಂಡ ನಿರ್ದೇಶನ (ಅನುಬಂಧ-3) ಗಳನ್ನು ಮಂಡಳಿವತಿಯಿಂದ ನೀಡಲಾಗಿದೆ.

1. ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರ ಜಾರಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಪಾರಂಪರಿಕ ತ್ಯಾಜ್ಯದ ಬಯೋಮೈನಿಂಗ್ ಹಾಗು ಬಯೋರೆಮಿಡಿಯೇಶನ್ ಖಚಿತಪಡಿಸಕೊಳ್ಳತಕ್ಕದು.
2. ನಗರ ಸ್ಥಳೀಯ ಸಂಸ್ಥೆಗಳು ಪಾರಂಪರಿಕ ತ್ಯಾಜ್ಯದ ವಿಲೇವಾರಿಗಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹೊರಡಿಸಲಾದ ಮಾರ್ಗಸೂಚಿಗಳನ್ನು ಪಾಲಿಸತಕ್ಕದು.
3. ನಗರ ಸ್ಥಳೀಯ ಸಂಸ್ಥೆಗಳು ಕಸ ಬಿಸಾಡುವ ಸ್ಥಳಗಳ ಬಯೋಮೈನಿಂಗ್ / ಬಯೋರೆಮಿಡಿಯೇಷನ್

| | | |
|---|---|---|
| | | ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ಹಾಗೂ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನಗಳನ್ನು ಪಾಲಿಸತಕ್ಕದ್ದು.<br>4. ನಗರ ಸ್ಥಳೀಯ ಸಂಸ್ಥೆಗಳು ಯಾವುದೇ ಹೊಸ ತ್ಯಾಜ್ಯವನ್ನು ತ್ಯಾಜ್ಯ ಬಿಸಾಡುವ ಸ್ಥಳಗಳಲ್ಲಿ ವಿಲೇವಾರಿ ಮಾಡಬಾರದು ಹಾಗೂ ಅಂತಹ ಹೊಸ ಘನ ತ್ಯಾಜ್ಯ ನಿರ್ವಹಣೆ ಮಾಡಲು ಸರಿಯಾದ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.<br><br>ಮಂಡಳಿಯು ಸ್ಥಳೀಯ ಸಂಸ್ಥೆಗಳ ಮೇಲೆ ಹಲವು ವರ್ಷಗಳಿಂದ 72 ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ ವಿವರಗಳನ್ನು **ಅನುಬಂಧ-4ರಲ್ಲಿ** ನೀಡಲಾಗಿದೆ.<br><br>ಅದಲ್ಲದೇ 173 ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ. 635 ಕೋಟಿ 68 ಲಕ್ಷಗಳ ಪರಿಸರ ಪರಿಹಾರ (Environment Compensation) ವನ್ನು ಲೆಕ್ಕ ಹಾಕಲಾಗಿದೆ ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಮೇಲ್ಮನವಿ ಸಲ್ಲಿಸಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿದೆ. |
| ಆ) | ಎನ್.ಜಿ.ಟಿ.ಯು ರಾಜ್ಯ ಸರ್ಕಾರಕ್ಕೆ ಪರಿಸರದ ದಂಡವಾಗಿ ರೂ.2900.00 ಕೋಟಿ ವಿಧಿಸಿರುವುದು ನಿಜವೇ; ಹಾಗಿದ್ದಲ್ಲಿ, ಸದರಿ ಮೊತ್ತವನ್ನು ಸರ್ಕಾರವು ಯಾವ ಲೆಕ್ಕ ಶೀರ್ಷಿಕೆಯಲ್ಲಿ ಭರಿಸುತ್ತಿದೆ; ಸದರಿ ಮೊತ್ತವನ್ನು ಭರಿಸಲು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು). ಎನ್.ಜಿ.ಟಿ. ಈ ರೀತಿ ದಂಡ ವಿಧಿಸುವ ಹಂತಕ್ಕೆ ಕಾರಣೀಕೃತರಾದ ಅಧಿಕಾರಿಗಳು, ಯೋಜನೆಗಳು ಹಾಗು ನೀತಿಯ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು). | ಹೌದು,<br>ಮಾನ್ಯ ಹಸಿರು ನ್ಯಾಯಾಧೀಕರಣವು ಮೂಲ ಅರ್ಜಿ ಸಂಖ್ಯೆ 606/2018 ರಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆ, ದ್ರವ ತ್ಯಾಜ್ಯದ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿನ ಅಂತರವನ್ನು ಪರಿಗಣಿಸಿ ರೂ.2900.00 ಕೋಟಿಗಳ ಮೊತ್ತವನ್ನು ಪರಿಸರ ಪರಿಹಾರ (environmental compensation) ವಿಧಿಸಿರುತ್ತದೆ. ಸದರಿ ಮೊತ್ತವನ್ನು ಪ್ರತ್ಯೇಕ ಖಾತೆಯಲ್ಲಿರಿಸಲು ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಿಂದ ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆ ಹಂತದಲ್ಲಿರುತ್ತದೆ.<br><br>**ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಮಾಹಿತಿ:**<br>• ಘನ ತ್ಯಾಜ್ಯ ನಿರ್ವಹಣೆಯಲ್ಲಿ ಬಹಳಷ್ಟು ತೊಡಕುಗಳಿರುತ್ತವೆ. ಸುಮಾರು 32 ಹೊಸನಗರಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗಾಗಿ ಜಮೀನು ಲಭ್ಯವಿರುವುದಿಲ್ಲ, ಹಾಗೂ ಜಮೀನು ಲಭ್ಯವಿರುವ ಹಲವು ಕಡೆ ಸಾರ್ವಜನಿಕರ ಪ್ರತಿಭಟನೆಯಿಂದ ಜಮೀನು ತ್ಯಾಜ್ಯ ಸಂಸ್ಕರಣೆಗೆ ಬಳಸಲಾಗುತ್ತಿಲ್ಲ. ಬಹಳಷ್ಟು ನಗರಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಮೂಲಭೂತ ಸೌಕರ್ಯದ ಕೊರತೆ ಹಾಗು ಮಾನವ ಸಂಪನ್ಮೂಲದ ಕೊರತೆಗಳಿರುತ್ತವೆ.<br>• ನಗರಗಳಲ್ಲಿ ಘನ ತ್ಯಾಜ್ಯ ವಸ್ತುಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಸಾರ್ವಜನಿಕರ, ಜನ ಪ್ರತಿನಿಧಿಗಳ ಸಹಭಾಗಿತ್ವ ಅತೀ ಅವಶ್ಯವಿರುತ್ತದೆ ಹಾಗೂ ಅಧಿಕಾರಿಗಳ |

| | | |
|---|---|---|
| | | ಕಾರ್ಯಕ್ಷಮತೆಯೂ ಅಗತ್ಯವಿರುತ್ತದೆ.<br>• ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾತ್ರವನ್ನು ತಿಳಿಸಿ, ಅರಿವು ಮೂಡಿಸಲು ಹೆಚ್ಚಿನ ಒತ್ತು ನೀಡಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ, ಹಾಗೂ ರಾಜ್ಯ ಮಟ್ಟದಲ್ಲಿ ವಿವಿಧ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಸ್ವಚ್ಛ ಭಾರತ ಮಿಷನ್ 2.0 ಅಡಿ ಮುಂದಿನ 5 ವರ್ಷಗಳಿಗೆ ಐ.ಇ.ಸಿ ಚಟುವಟಿಕೆಗಳಿಗೆ ರೂ. 220 ಕೋಟಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದು, ಅನುಮೋದನೆ ಹಂತದಲ್ಲಿರುತ್ತದೆ.<br>• ಹಾಗೆಯೇ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಪ್ರತಿನಿಧಿಗಳು, ಘನ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರು, ಸ್ವಚ್ಚತಾ ಕೆಲಸಗಾರರ ಸಾಮರ್ಥ್ಯ ಅಭಿವೃದ್ಧಿಗಾಗಿ ರಾಜ್ಯ ಹಾಗು ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.<br>• ತ್ಯಾಜ್ಯ ನಿರ್ವಹಣೆಯಲ್ಲಿ ಉತ್ತಮ ಪದ್ಧತಿ ಅನುಸರಿಸುತ್ತಿರುವ ನಗರಗಳನ್ನು ಪ್ರೋತ್ಸಾಹಿಸಿ ಇತರ ನಗರಗಳು ಕೂಡ ಉತ್ತಮ ಪದ್ಧತಿಗಳನ್ನು ರೂಢಿಸಿಕೊಳ್ಳುವಂತೆ ಸೂಚನೆಯನ್ನು ನೀಡಲಾಗಿರುತ್ತದೆ. ಸ್ವಚ್ಛ ಭಾರತ ಮಿಷನ್ 2.0 ಅಡಿ ಮುಂದಿನ 5 ವರ್ಷಗಳಿಗೆ ಸಾಮರ್ಥ್ಯ ಅಭಿವೃದ್ಧಿಗೆ ರಾಜ್ಯ ಹಾಗು ಕೇಂದ್ರ ಸರ್ಕಾರದ ಅನುದಾನದಲ್ಲಿ ಅಗತ್ಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಯೋಜನೆ ಅನುಷ್ಠಾನ ಹಂತದಲ್ಲಿರುತ್ತದೆ.<br>• ಘನತ್ಯಾಜ್ಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ರಾಜ್ಯಮಟ್ಟದಲ್ಲಿ Sate Level Advisory Committee, State Level High Powered Committee ಯನ್ನು ರಚಿಸಿದ್ದು, ನಿಯಮಿತವಾಗಿ ಸದರಿ ಸಮಿತಿಯು ಸಭೆಗಳನ್ನು ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಸರ್ಕಾರದ ಮಟ್ಟದಲ್ಲಿ ಹಾಗು ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಪ್ರಗತಿ ಪರಿಶೀಲನೆ ಸಭೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ.<br>• ರಾಜ್ಯದ ನಗರ ಪ್ರದೇಶದಲ್ಲಿ ಉತ್ಪಾದನೆಯಾಗುವ ಘನ ತ್ಯಾಜ್ಯ ವಸ್ತುಗಳನ್ನು ಪೂರ್ಣಪ್ರಮಾಣದಲ್ಲಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಎಲ್ಲಾ ಅಗತ್ಯ ಕ್ರಮ ವಹಿಸಲಾಗುತ್ತಿದೆ.<br>• ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೈಗೊಂಡ ಕ್ರಮದ ವಿವರವನ್ನು ಉಪ ಪ್ರಶ್ನೆ ಸಂಖ್ಯೆ: 'ಅ' ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ರಾಜ್ಯ ಸರ್ಕಾರದ ಮಾಲಿನ್ಯ ನಿಯಂತ್ರಣಾ ಮಂಡಳಿಯಲ್ಲಿ ಹಲವಾರು ಕಾಯ್ದೆಗಳು ಇದ್ದರೂ ಸಹ ಕ್ರಮಬದ್ಧವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವುದು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ಮತ್ತು ಇವುಗಳ ಅಡಿಯಲ್ಲಿ ಹೊರಡಿಸಿರುವ ನಿಯಮಗಳು ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986ರಡಿಯಲ್ಲಿ ಹೊರಡಿಸಿರುವ ಹಲವಾರು ನಿಯಮಗಳನ್ನು ಪರಿಣಾಮಕಾರಿಯಾಗಿ ಹಾಗೂ ಕ್ರಮಬದ್ಧವಾಗಿ, ಅನ್ವಯಿಸುವಂತೆ, ಅನುಷ್ಠಾನಗೊಳಿಸುತ್ತಿದೆ. |
| ಈ) | ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 15112/2009 ಆದೇಶದ ಪ್ರಕಾರ ಕೈಗೊಂಡಿರುವ ಕ್ರಮಗಳ ಮಾಹಿತಿಯನ್ನು ಒದಗಿಸುವುದು? | ಜಲ ಕಾಯ್ದೆ, ವಾಯು ಕಾಯ್ದೆ ಮತ್ತು ಪರಿಸರ (ಸಂರಕ್ಷಣೆ) ಕಾಯ್ದೆ ಇವುಗಳ ನಿಬಂಧನೆಗಳ ಅಡಿಯಲ್ಲಿ ಯಾವುದೇ ಕಾರ್ಖಾನೆ, ಕಟ್ಟಡ ಮುಂತಾದ ಸಂಸ್ಥೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮತ್ತು ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರದಿಂದ (ಅನ್ವಯಿಸುವಂತೆ) ಪೂರ್ವಾನುಮತಿ ಪಡೆಯದೆ ಸ್ಥಾಪನಾ ಕಾರ್ಯವನ್ನು ಪ್ರಾರಂಭ ಮಾಡಬಾರದು. ಆದರೆ, ಹಲವಾರು ಪ್ರಕರಣಗಳಲ್ಲಿ ಅಂತಹ ಸಂಸ್ಥೆಗಳು ಅರ್ಜಿ ಸಲ್ಲಿಸುವ ಮೊದಲೇ ಅಥವಾ ಅರ್ಜಿಯು ಮಂಡಳಿಯಲ್ಲಿ ಪರಿಶೀಲನಾ ಹಂತದಲ್ಲಿರುವಾಗಲೇ ಕಟ್ಟಡ ಕಾಮಗಾರಿಯನ್ನು ಅಥವಾ ಸ್ಥಾಪನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಅಥವಾ ಕಾರ್ಯಾಚರಣೆಯನ್ನು ಸಹ ಪ್ರಾರಂಭ ಮಾಡಿರುವುದನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಗಮನಿಸಿ, ದಿನಾಂಕ:13.11.2007 ರಂದು ನಡೆದ ತನ್ನ 168ನೇ ಆಡಳಿತ ಮಂಡಳಿಯ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಕೂಲಂಕಷವಾಗಿ ಚರ್ಚಿಸಿ, ಅಂತಹ ತಪ್ಪಿತಸ್ಥ ಸಂಸ್ಥೆಗಳ ವಿರುದ್ಧ ಧೀರ್ಘ ಸಮಯ ತೆಗೆದುಕೊಳ್ಳುವಂತಹ ಕಾನೂನು ಸಮರವನ್ನು ಸಾರುವುದನ್ನು ಬಿಟ್ಟು, ಕಾಮಗಾರಿಯನ್ನು ನಿಲ್ಲಿಸುವಂತಹ ಅನ್ಯ ಮಾರ್ಗ ತನ್ನ ಮುಂದೆ ಇಲ್ಲ ಎಂಬುದನ್ನು ಹಾಗೂ ಅಂತಹ ಪ್ರಾರಂಭಿಕ ಹಂತದ ಕಾಮಗಾರಿಯಿಂದ ಗಂಭೀರ ರೂಪದ ಪರಿಸರ ಹಾನಿ ಆಗುವುದಿಲ್ಲ ಎಂಬುದನ್ನು ಗಮನಿಸಿ, ಸದರಿ ಉದ್ದಿಮೆ/ಸಂಸ್ಥೆಗಳಿಂದ ಆಡಳಿತಾತ್ಮಕ ಶುಲ್ಕವನ್ನು ದಂಡದ ರೂಪದಲ್ಲಿ ಸಂಗ್ರಹಿಸುವುದನ್ನು ಅನುಮೋದಿಸಿತು.<br><br>ಅದರಂತೆ, ದಿನಾಂಕ:18.12.2007 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಕೃತ ಜ್ಞಾಪನಾ ಪತ್ರವನ್ನು ಹೊರಡಿಸಿ, ತನ್ನ ಅಧೀನ ಕಛೇರಿಗಳಿಗೆ, ಸ್ಥಾಪನಾ ಅನುಮತಿ ಅಥವಾ ಚಾಲನಾ ಸಮ್ಮತಿ ನೀಡುವ ಮೊದಲೇ ಕಾರ್ಯ ಆರಂಭ ಮಾಡಿದ ಸಂಸ್ಥೆಗಳಿಂದ ಐದು ಪಟ್ಟು ಸಮ್ಮತಿ ಶುಲ್ಕವನ್ನು, ಸ್ವಯಂಪ್ರೇರಿತವಾಗಿ ಪಾವತಿ ಮಾಡುವ ಅರ್ಜಿದಾರರಿಂದ, ಆಡಳಿತಾತ್ಮಕ ಶುಲ್ಕವನ್ನು ದಂಡದ ರೂಪದಲ್ಲಿ ಸಂಗ್ರಹಿಸುವ ಪ್ರಕ್ರಿಯೆಗೆ ಚಾಲನೆ ನೀಡಿತು (ಪ್ರತಿಯನ್ನು ಅನುಬಂಧ-5ರಲ್ಲಿ ಒದಗಿಸಿದೆ). |

| | | |
|---|---|---|
| | | ಸದರಿ ವಿಚಾರವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ:08.06.2015 ರಂದು ನಡೆದ ತನ್ನ 198 ನೇ ಆಡಳಿತ ಮಂಡಳಿಯ ಸಭೆಯಲ್ಲಿ ಮತ್ತೊಮ್ಮೆ ಸುಧೀರ್ಘವಾಗಿ ಚರ್ಚಿಸಿ, ಆಡಳಿತಾತ್ಮಕ ಶುಲ್ಕವನ್ನು ವಿಧಿಸಿ ಸಮ್ಮತಿಯನ್ನು ನೀಡುವುದು ಫೇ ಅಂಡ್ ಪಲ್ಯೂಟ್ ಸಂಸ್ಕೃತಿಗೆ ಆಸ್ಪದ ಕೊಟ್ಟಂತಾಗುವುದು ಎಂಬ ವಿಚಾರವನ್ನು ಪರಿಗಣಿಸಿ ಸದರಿ ಶುಲ್ಕವನ್ನು ಸಂಗ್ರಹಿಸುವ ಪ್ರಕ್ರಿಯೆಯನ್ನು ಹಿಂಪಡೆಯಿತು ಮತ್ತು ದಿನಾಂಕ: 04.07.2015 ರಂದು ತತ್ಸಂಬಂಧ ಜ್ಞಾಪನ ಪತ್ರವನ್ನು ಸಹ ಹೊರಡಿಸಲಾಗಿರುತ್ತದೆ. **ಅನುಬಂಧ-6ರಲ್ಲಿ ಒದಗಿಸಿದೆ.**<br><br>ಅದರಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕರ್ನಾಟಕ ಉಚ್ಚನ್ಯಾಯಲಯ, ಬೆಂಗಳೂರು ಪೀಠ, ಇಲ್ಲಿ ಮರು ಪರಿಶೀಲನಾ ಅರ್ಜಿ ಸಂಖ್ಯೆ : 76/2023 ಯನ್ನು ಸಲ್ಲಿಸಲು ಕ್ರಮವಹಿಸಲಾಗಿದೆ.<br><br>ಈ ವಿಚಾರದಲ್ಲಿ ಮಾನ್ಯ ನ್ಯಾಯಲಯವು ನೀಡುವ ಮುಂದಿನ ತೀರ್ಪಿನ ಪ್ರಕಾರ ಸೂಕ್ತ ಕ್ರಮ ವಹಿಸಲಾಗುವುದು. |

ಸಂಖ್ಯೆ: ಅಪಜೀ 22 ಇಎನ್‌ಜಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ
ಮತ್ತು ಪರಿಸರ ಸಚಿವರು.

Annexure-I *Review meeting with Bruhat Bengaluru Mahangarapalike*

| SL. No | Date | Description |
|---|---|---|
| 01 | 19.01.2020 | Meeting conducted BBMP with Cement Factories regarding Lifting of Reduced Derived Fuel |
| 02 | 18.12.2020 | Meeting Held with BBMP to review Compliances |
| 03 | 20.01.2021 | Meeting conducted with Joint Commissioners of BBMP of review compliance |
| 04 | 05.01.2021 | Meeting held with residents of Sir M. Visweshwaraih Layout BBMP official |
| 05 | 08.02.2021 | Meeting held regarding implementation of construction and demolition waste management Rules 2016 |
| 06 | 12.02.2021 (Non BBMP) | Review meeting on implementation of C&D waste management Rules 2016 |
| 07 | 20.02.2021 | Meeting held with residents of Sir M. Visweshwaraih Layout BBMP officials, BDA Officials |
| 08 | 05.08.2021 | Meeting conducted BBMP officials |
| 09 | 22.07.2021 | Meeting held with Special Commissioners BBMP |
| 10 | 13.09.2021 | Meeting held with BBMP officials |
| 11 | 20.02.2021 | Video conference with project Directors of District Urban Development cell |
| 12 | 12.11.2021 | Noncompliance to the direction in meeting held on 27.07.2021 and 13.09.2021 |
| 13 | 12.11.2021 | Meeting Conducted with Special commissioners of BBMP to review compliance |
| 14 | 17.11.2021 | Meeting conducted with BBMP to review compliance |
| 15 | 27.12.2021 | Meeting conducted with BBMP to review compliance |
| 16 | 04.01.2022 | Meeting conducted with Special Commissioners BBMP |
| 17 | 27.01.2022 | Noncompliance to the direction in meeting on 22.07.2021 |
| 18 | 09.03.2022 | Noncompliance of the direction issued in meeting |

| | | |
|---|---|---|
| | | held on 30.11.2019 |
| 19 | 23.03.2022 | Review of status of Solid waste Management by Chikkaballapura District |
| 20 | 19.04.2022 | Meeting held with Deputy Commissioner, Mandya |
| 21 | 19.04.2022 | Meeting held with Deputy Commissioner, Ramanagara |
| 22 | 06.05.2022 | Review of the progress made by Bruhat Bengaluru Mahanagara Palike (BBMP) of the Solid waste Management |
| 23 | 02.06.2022 | Review Compliance made by Brand owners of Disposal products |
| 24 | 30.06.2022 | Review of progress made by Bengaluru Urban District |
| 25 | 17.08.2022 | Visit to Solid Waste management Facility at Indore, Madhya Pradesh |
| 26 | 19.11.2022 | Review the implementation of Solid Waste management ruels2016 |

## Annexure II District Level review meeting held

| Sl. No. | District | Date | Meeting |
|---|---|---|---|
| 1 | Shivamogga | 05.12.2019 | Meeting With DC, SP, ADC, Commissioner and Chief Officer |
| 2 | Belgaum | 13.12.2019 | Meeting with CMC |
| 3 | Davangere | 31.12.2019 | Meeting with RSEO, RO, Municipal Corporation Dandeli CMC and other Officers |
| 4 | Belgaum | 26.12.2019 | Chairing the meeting & Workshop on direction issued by Hon"ble NGT |
| 5 | Belgaum | 04.01.2020 | Chairing the Stakeholders Meeting on Implementation of SWM Rules-2016 |
| 6 | Belgaum | 23.01.2020 | Chairing the inaugural function of National Seminar |
| 7 | Hubli | 27.01.2020 | Visit to Gokak & Savadatti-ULBS |
| 8 | Koppala | 11.12.2020 | Meeting with Concerned Department on Implementation of SWM Rules-2016 |
| 9 | Mysore | 26.02.2020 | Meeting with concerned Department on Implementation of SWM Rules-2016 |
| 10 | Tumkur | 26.11.2020 | Meeting with concerned Department on Implementation of SWM Rules-2016 |
| 11 | Hubli | 17.02.2021 | Meeting with MD Smart City & Commissioner HDMC, CEO, and Zonal Manager |
| 12 | Mysore | 24.08.2021 | Meeting with District Administration Mysore CMC Officers |
| 13 | Davangere | 08.09.2021 | Discussion with Commissioners and Municipal Corporation Officers |
| 14 | Hubli | 09.09.2021 | Brief Meeting with Chief Officers |
| 15 | Belgaum | 10.09.2021 | Visit to Sankeshwar and Meeting with Chief Officers |
| 16 | Mysore | 24.09.2021 | Meeting with DC, TMC RO, KSPCB |

| | | | |
|---|---|---|---|
| 17 | Mysore | 18-12-2021 | Interaction meeting with all District Level Officers |
| 18 | Davangere | 11.03.2022 | Meeting with Special task force Committee |
| 19 | Davangere | 12.03.2022 | Meeting with Awareness Programme DC, RSEO, PDO CMC |
| 20 | Ramanagara | 19.04.2022 | Meeting with District Level Special Task Force and local bodies Ramanagara |
| 21 | Mandya | 19.04.2022 | Meeting with District Level Special Task Force and local bodies Mandya |
| 22 | Davangere | 07.05.2022 | Meeting with Task force Committee and city corporation officers |
| 23 | Belgaum | 09.05.2022 | Meeting with HDMC Official |
| 24 | Hubli | 10.05.2022 | Randam Inspection TMC, and Chief Officers |
| 25 | Mysore | 12.05.2022 | One day work shop on SWM meeting with DC,CEO,CMC Commissioner RSEO, ROs and other Officer |
| 26 | Hubli | 20.05.2022 | Meeting with Dharwad Task Force Committee meeting |
| 27 | Hubli | 21.05.2022 | Stake Holders Meeting KSRTC, Airport, Police housing Corporation |

ಫ್ಯಾಕ್ಸ್/Fax : 080-25586321
ಇ-ಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

No. PCB/WMC/SWM/4/2021/ 4865 Date: 20 DEC 2021

**DIRECTION UNDER SECTION 5 OF THE ENVIRONMENT (PROTECTION) ACT, 1986 FOR ENFORCEMENT OF PROVISIONS OF SOLID WASTE MANAGEMENT (SWM) RULES, 2016 REGARDING BIO MINING OF LEGACY WASTE.**

**Sub.:** Direction Under Section 5 of The Environment (Protection) Act, 1986 For Enforcement of Provisions of Solid Waste Management (SWM) Rules, 2016 Regarding Bio Mining of Legacy Waste.
**Ref.:** Direction under section 5 of the Environment (Protection) Act, 1986 F.No/ B-11011/UPC-II/MSW(Direction)/2020-21/5331 Dt.: 27.01.2021

***

**WHEREAS,** the Central Government has notified the standards for discharge of environmental pollutants from various categories of industries under the Environment (Protection) Act, 1986 and the rules framed there under;

**WHEREAS,** the Ministry of Environment, Forest & Climate Change has notified Solid Waste Management Rules, 2016, which inter-alia state procedures for Solid Waste Management;

**WHEREAS,** under Rule 15 (zj) of SWM Rules, 2016 local authorities and village Panchayats shall investigate and analyse all old open dumpsites and existing operational dumpsites for their potential of bio-mining and bio-remediation and whosesoever feasible, take necessary actions to bio-mine or bio-remediate the sites;

**WHEREAS,** under Rule 16 (a) of Solid Waste Management Rules, 2016, the State Pollution Control Board or Pollution Control Committee shall enforce these rules in their State through local bodies in their respective jurisdiction and review implementation of these rules at least twice a year in close coordination with concerned Directorate of Municipal Administration of Secretary-in-charge of State Urban Development Department;

KSPCB BANGALORE WMC Section

**WHEREAS,** remediation of all Dumpsites has to be completed by April 7, 2021 as per Rule 22 of SWM Rules, 2016.

**WHEREAS,** in compliance of Hon'ble NGT Order dated 16.01.2019 in the matter of OA no.606/2018, CPCB published Guidelines for Disposal of Legacy waste;

**WHEREAS,** Hon'ble NGT has issued several Directives on the matter including the following:

(i) In OA no. 519/2019, all Chief Secretaries, States/UTs to ensure completion of remediation of dumpsites by October, 2020.
(ii) In OA no. 53/2020, CPCB to complete inventorization of dumpsites in the Country.
(iii) In OA no. 593/2017, CPCB to compile information related to Legacy Waste Management and identify gaps thereof.

**WHEREAS,** in compliance with above orders of Hon'ble NGT, several communications dated 14.05.2020, 28.07.20 & 31.07.2020 have been issued by CPCB to States/UTs to provide requisite information on the matter.

**WHEREAS,** complete information on the matter is yet to be received from all States/UTs.

**WHEREAS,** CPCB officials inspected dumpsites in various States where bioremediation of legacy waste is being carried out and made the following observation:

i. Most of the ULBs engaged in the bio mining process of the legacy waste not following CPCB Guidelines on disposal of legacy waste.
ii. Analysis of different screened fractions is not being carried out prior to disposal/utilization.
iii. Poor quality of screen fractions and screened fractions not being lifted by the users.
iv. Adequate plan for disposal of screened fractions at the dumpsites not prepared and screened fractions accumulated on site.
v. No leachate treatment being carried out and stagnation of leachate noticed at the dumpsites.
vi. Records/documents for the sale of the RDFs, inerts and other materials not maintained.
vii. Fresh Solid Waste continued to be dumped at these dumpsites.

KSPCB BANGALORE WMC Section
KSPCB BANGALORE WMC Section

WHEREAS, vide Order dated 21-8-2020 in the matter of OA No. 681/2018, Hon'ble NGT directed CPCB to issue fresh Direction in this regard to all the State PCBs/PCCs to coordinate with concerned Local Authorities for further Action in the matter. Further, as per the Hon'ble NGT's Direction, at least one site is to be remediated and made a model of compliance in each of the 122 Non-Attainment Cities;

WHEREAS, CPCB directed Karnataka State Pollution Control Board (KSPCB) vide direction under ref.

WHEREAS, KSPCB officials inspected dumpsites in various states where bioremediation of legacy waste is being carried out and made the following observation:

i. Most of the ULBs have taken action for remediation of legacy waste dump site.
ii. No leachate treatment being carried out and stagnation of leachate noticed at the dumpsites.
iii. Fresh Solid Waste continued to be dumped at these dumpsites.

NOW THEREFORE, in view of the above and in exercise of powers delegated to the Chairman, KSPCB, under Section 5 of the Environment (Protection) Act, 1986, the following directions are issued for compliance:

1. ULBs to ensure that necessary action for biomining and bio-remediation of these dumpsites in compliance with Provisions of SWM Rules, 2016.
2. ULBs shall ensure that concerned Local Authorities engaged in the bio mining process of legacy waste follow procedures as per CPCB Guidelines for Disposal of Legacy Waste with specific compliance to the following points.

   (i) Analysis of various screened fraction materials i.e. RDF, fine earth/bio earth etc., prior to its disposal/utilization.
   (ii) Preparation of plan for utilization/disposal of screened fractions
   (iii) Adequate provisions for leachate treatment.
   (iv) Maintenance of records/documents for disposal/utilization of the RDF or fine earth and other materials.
3. ULBs shall prepare time targeted Action Plan for biomining/bio-remediation of these dumpsites in compliance with points listed above. The timelines as specified in SWM Rules, 2016 and Hon'ble NGT Directions on the matter are to be adhered to for remediation of these sites.

KSPCB BANGALORE WMC Section

4. ULBs to ensure that no fresh waste is disposed at these dumpsites and local authorities make proper arrangement for management of fresh solid waste.

ULBs are hereby directed to submit action taken report within 30 days from receipt of these Directions.

CHAIRMAN
KARNATAKA STATE POLLUTION CONTROL BOARD

**To**

All Urban Local Bodies, Karnataka

**Copy to :** Central Pollution Control Board, Parivesh Bhawan, Easte Arjun Nagar, Delhi-110032

KSPCB BANGALORE WMC Section

## Annexure IV

| Sl No. | Year of filing | Date of registering the case | Case No. CC | Name and Address of the Accused | Under Section | Act | Court | Remarks |
|---|---|---|---|---|---|---|---|---|
| 1 | 1997 | 06-11-2007 | CC.11/2007 | M/S.CMC, Bidar | | EP Act & TGRCA Notification | PCJ Bidar | Disposed |
| 2 | 2002 | 05.04.2002 | CC.No.,375/ 2002 | TMC,Sandur | u/s.24 & 25 r/w ,43 & 44 | Water Act | JMFC, Sandur | Disposed |
| 3 | 2002 | 08-08-2006 | CC.404/02 | TMC,Chellakere | | Water Act | JMFC, Chellekere | Disposed |
| 4 | 2002 | 08-08-2006 | CC.948/02 | TMC, Nanjangud | | Water Act | JMFC, Nanjangud | Disposed |
| 5 | 2002 | 37316 | CC.822/02 | CMC,Sirsi | | Water Act | JMFC, Sirsi | Disposed |
| 6 | 2002 | 34874 | CC.498/02 | City Corporation, Davangere | | Water Act | JMFC, Davangere | Disposed |
| 7 | 2005 | 38958 | CC.383/05 2084/06 | Chief Officer TMC, Kundapur | 19/EP Act for CRZ Violation 2 (X11) | EP Act | JMFC, Kundapur | Disposed |
| 8 | 2005 | 38491 | CC.258/05 | TMC,Ramadurga | u/s.44 of Water Act | Water Act | JMFC, Ramadurga | Disposed |
| 9 | 2006 | 05-04-2007 | CC.825/07 | CMC,Bagalkot | | Water Act | JMFC, Bagalkote | Disposed |
| 10 | 2006 | 03-03-2006 | CC.824/06 | TMC,Hiriyur | | Water Act | JMFC, Hiriyur | Disposed |
| 11 | 2006 | 04-06-2007 | CC.433/06 ( 394/07 | CMC,Chitradurga | | Water Act | JMFC, Chitradurga | Disposed |
| 12 | 2006 | 4.10.2006 | CC.988/06 | Town Panchayat, Bantwal | U/s 49 of water Act, 1974 offence punishable U/s 24,25 &26 R/W Section 43 & 44of the said Act | Water Act | JMFC, Bantwal | Disposed |
| 13 | 2006 | 38817 | C.C. 232/06 | Town Panchayat, Bantwal | U/s 49 of water Act, | Water Act | JMFC, Bantwal | Disposed |
| 14 | 2006 | 10/10/2010 6 | CC.29857/0 6 | CMC, Yelahanka | u/s 41(2) of water act | Water Act | CMM court Nirupa thunga Road, B'lore | Pending |
| 15 | 2006 | 17.05.2006 | CC.1101/07 (New) 261/06 (OLD) | CMC, K.R.Puram Sri.Bylappa | 15 r/w sec.7of EP Act | EP Act | CMM court Nirupathun ga Road,B'lore | Disposed |
| 16 | 2006 | 38994 | CC.991/06 | CMC,Dandeli | | Water Act | JMFC, Dandeli | Disposed |

| | | | | | | | | |
|---|---|---|---|---|---|---|---|---|
| 17 | 2006 | 05-05-2006 | C.Misc.88/06 | CMC,Dandeli | | Water Act | JMFC, Dandeli | Disposed |
| 18 | 2006 | 05-05-2006 | CC.751/06 | TMC, Kanakapura | u/s 49 of Water act,1974 | Water Act | JMFC, Kanakapura | Pending |
| 19 | 2006 | 38964 | CC.25791/06 | CMC,Bommanahalli | Water Act | Water Act | 3rd ACMM,Court | Disposed |
| 20 | 2006 | 05-05-2006 | C.Misc.1070/06 | CMC,Bommanahalli | | Water Act | 3rd ACMM,Court | Pending |
| 21 | 2006 | 05-05-2006 | CC.928/06 | Sri.Thippeswamy & others,Retd Chief Engineer,BWSSB,Bangalore (Bellandure Lake) | | Water Act | MMTC-1, Mayohall | Disposed |
| 22 | 2006 | 05-05-2006 | CC.33636/06 | V.Valey, BWSSB, STP, Nayandahalli, Mysore Road, B'lore | | Water Act | Additional Chief Metropolitan-3, N irupathunga Road,B'lore | Disposed |
| 23 | 2006 | 05-05-2006 | CC.35389/06 | Uttarahalli Panchayat (V.Valley related) | | Water Act | Additional Chief Metropolitan-3, Nirupathunga Road, B'lore | Disposed |
| 24 | 2006 | 05-05-2006 | CC.1102/06 | CMC,Mahadevapura, Bangalore-560048 | U/s.25 R/w 43,44 & 49 of WPC,1974 | Water Act | JMFC Mayohall, Bangalore | Disposed |
| 25 | 2006 | 38967 | CC.1101/06 | CMC K.R.Puram, Bangalore | U/s 25 R/w sec 43, 44 & 49 | Water Act | CMM traffic court, Mayohall, Bangalore | Pending |
| 26 | 2008 | 09-02-2008 | CC.848/2008 | Mysore City Corporation, Slaughter House, Mysore | | Water Act | III JMFC Court, Mysore | Pending |
| 27 | 2007 | 09-02-2008 | CC.56/2007 | Mysore City Corporation, Mysore | | Water Act | JMFC Court, Mysore | Disposed |
| 28 | 2007 | 03-03-2007 | CC.1915/2008 (551/07) | CMC,Gokak | U/s. 25, 26 of Water Act Panushable u/s 43 & 44 of the Said Act. | Water Act | JMFC, Gokak | Disposed |

| | | | | | | | | |
|---|---|---|---|---|---|---|---|---|
| 29 | 2007 | 03-03-2007 | CC.95/07 | Chief Engineer, BWSSB,Cauvery bhavan , Bangalore | 24 & 25 of water act r/w 43 & 44 of the said act. | Water Act | JMFC Court Mayohall, B'lore | Disposed |
| 30 | 2007 | 04-05-2007 | CC.596/07 | TMC,Sira | | Water Act | JMFC,Sira | Disposed |
| 31 | 2006 | 06-02-2006 | CC.907/06 | TMC,Tiptur | | Water Act | JMFC,Tiptur | Pending |
| 32 | 2007 | 03-05-2007 | CC.136/06 | CMC,Shimoga | 25 of Water Act | Water Act | JMFC Shimoga | Disposed |
| 33 | 2017 | 01-07-2017 | CC.215/2007 | TMC,Shikaripura | 25 of Water Act | Water Act | Sr CJ &Adll JMFC, Shikaripura | Disposed |
| 34 | 2007 | 04-02-2007 | CC.660/07 | CMC,Sagar | 25 of Water Act | Water Act | JMFC, Sagar | Disposed |
| 35 | 2007 | 39059 | CC.7/07 | CMC Rabakavi, Banahatti Jamkhandi Tq | u/s 41 (2) water Act | Water Act | JMFC, Banahatti | Disposed |
| 36 | 2007 | 39034 | CC.825/07 | CMC,Bagalkot | u/s.41 (2) of water act | Water Act | JMFC, Bagalkote | Disposed |
| 37 | 2007 | 15.2.2007 | CC.114/07 | Town Panchayat, Mulki | U/s 49 of water Act, 1974 offence punishable U/s 24,25 &26 R/W Section 43 & 44of the said Act | Water Act | JMFC, Moodbidri | Disposed |
| 38 | 2007 | 2007 | CC.20819/07 | CMC,Byatrayanapura | u/s 43 of water act | Water Act | CMM court Nirupathunga Road,B'lore | Disposed |
| 39 | 2007 | 05-03-2007 | CC.21199/07 | CMC,Rajarajeshwari nagar,B'lore | | Water Act | Additional Chief Metropolitan-3,Nirupathunga Road,B'lore | Pending |
| 40 | 2007 | 06-02-2007 | CC.21200/07 | TMC Kengeri | | Water Act | Additional Chief Metropolitan-3, Nirupathunga Road,B'lore | Pending |

| | | | | | | | | |
|---|---|---|---|---|---|---|---|---|
| 41 | 2008 | 06-02-2008 | CC.728/08 | CMC,Nippani | u/s.25 of Water act punishable u/s.43 ,44 of the said act | Water Act | JMFC, Nippani | Pending |
| 42 | 2008 | 04-03-2008 | CC.367/08 | TMC,Sankeshwar | | Water Act | JMFC, Sankeshwar | Disposed |
| 43 | 2008 | 39834 | CC.132/09 | TMC,Soundatti | | Water Act | JMFC, Soundatti | Disposed |
| 44 | 2013 | 4.7.2013 | CC.1065/13 | M/s.BBMP Civil Slaughter House, Tannery Road, Frazer Town,B'lore | u/s.37 of Air Act | Water Act | JMFC Court Mayohall, B'lore | Pending |
| 45 | 2013 | 04-03-2013 | CC.909/13 | CMC,Ramanagara | u/s 49 of Water act,1974 | Water Act | JMFC Ramanagara | Disposed |
| 46 | 2015 | 42364 | CC No.30236/15 (PCR.No.9304/15) | BWSSB,Cauvery Bhawan,K.G.Road, Bangalore | | Water Act | Addl Chief Judicial magistrate Court,Bangalore | Pending |
| 47 | 2014 | 41991 | CC.35073/2014 | 1. Managing Director BESCOM 2.Commissioner BBMP 3.M/s **Bhaskar Powerloom,** 27th/1,20th cross, Bhuvaneshwarinagar,KP Agrahara, Blore | | Water Act | 3rd Addl CMM Court,Nirupathunga Road | Pending |
| 48 | 2015 | 22-06-2015 | .CC No.3029/2015 | City Corporation, Davangere | Sec 25 punishable u/s 44 of Water Act | Water Act | JMFC, Davangere | Pending |
| 49 | 2016 | 42403 | CC No.137/16 | CMC, Challakere | | Water Act | JMFC, Challakere | Pending |
| 50 | 2016 | 24/02/2016 | CC No.526/15 | TMC, Hosadurga | | Water Act | JMFC, Hosadurga | Pending |
| 51 | 2014 | 17/02/14 | CC No.631/14 | City Muncipal Council, Nanjangud, Mysore. | U/s 43 & 44 | Water Act | Addl. Civil Judge & JMFC-nanjangud | Pending |
| 52 | 2014 | 02.12.2014 | CC.26/2014 | Town Municipal Council,Hunsur. | U/s 43 & 44 | Water Act | JMFC, Hunsur | Pending |

| | | | | | | | | |
|---|---|---|---|---|---|---|---|---|
| 53 | 2017 | 30.06.2017 | CC.2772/17 | Mysore City Corporation, STP A&D Drainage District, (Rayanakere), Myosre | U/s 44 of water act | Water Act | II Addl I civil Judge,Mysore | Pending |
| 54 | 2017 | 30.06.2017 | CC.2773/17 | MysoreCity Corporation, TP-B Drainage District, Vidyaranyapuram, Mysore | U/s 44 of water act | Water Act | II Addl I civil Judge,Mysore | Pending |
| 55 | 2017 | 30.06.2017 | CC.2774/17 | Mysore City Corporation, STP-C Drainage District, Kesare, Myosre | U/s 44 of water act | Water Act | II Addl I civil Judge,Mysore | Pending |
| 56 | 2015 | 42198 | CC.376/2015 | Town Panchayat, Khanapur Tq ,Belgaum-1 | | Water Act | JMFC,Khanapur | Disposed |
| 57 | 2015 | 42243 | CC.477/15 | City Corporation, Belagavi | | Water Act | JMFC Belagavi | Pending |
| 58 | 2014 | 41960 | CC.No.33/14 | TMC,Nanjangud | Water Act | Water Act | Addl Civil Judge & JMFC,Nanjangud | Pending |
| 59 | 2014 | 02.12.2014 | CC.No.64/14 | TMC,K.R.Nagar | U/s 43 & 44 | Water Act | JMFC (Jr) Dn,KR.Nagar | Pending |
| 60 | 2014 | 02.12.2014 | CC.No.85/14 | Town Panchayat, T.Narasipura, Mysore. | u/s 24,25,punishable u/s 43 & 44 of WPC Act | Water Act | JMFC, T.Narasipura | Pending |
| 61 | 2015 | 21.5.2015 | CC.No.9014/15 | Chairman, BWSSB. | | Water Act | ACMM Court at Bangalore | Pending |
| 62 | 2018 | 2018 | CC.722/2018 | TMC Kunigal | WPC u/s 44 | Water Act | JMFC Kunigal | Pending |
| 63 | 2020 | 04-12-2020 | PCR.30/2020 CC.No.216/2020 | The Commissioner, Mangalore City Corporation, Mangalore, DK.Dist. | u/s.15 r/w sce.19 of EP act,1986 | EP Act | CJM,Mangalore | Pending |
| 64 | 2017 | 07--09-2020 | PCR.No.311/2017 | T.P.Alnavar | | Water Act | JMFC Dharwad | Pending |
| 65 | 2020 | 14-09-2020 | PCR.No.118/2020 | CMC Chamarajanagara | u/s 24,25,26 punishable u/s 43 & 44 | Water Act | Pri Civil Judge and JMFC Chamarajanagara | Pending |
| 66 | 2020 | 11-09-2020 | Yet to receive | CMC Kollegala | u/s 24,25,26 punishable u/s 43 | Water Act | JMFC Kollegala | Pending |

| | | | | | | | | |
|---|---|---|---|---|---|---|---|---|
| | | | | | & 44 | | | |
| 67 | 2020 | 27-01-2022 | CC.No.09/2022 | TMC Gundalpet | u/s 24,25,26 punishable u/s 43 & 44 | Water Act | Senior Civil Judge and JMFC Gundalpet | Pending |
| 68 | 2020 | 05-11-2020 | PCR.No.96/2022 | Town Panchayath, Hunur | u/s 24,25,26 punishable u/s 43 & 44 | Water Act | JMFC Hunnur | Pending |
| 69 | 2020 | 21-09-2020 | PCR.No.17/2020 | TP.Yalandur | u/s 24,25 & 26 punishable u/s 44 & 44 | Water Act | Civil Judge JMFC Yelandur | Pending |
| 70 | 2021 | 09-12-2020 | CC.No.755/2021 | The Commissioner, CMC,Sri.M.L.Ramesh Ex.Commissioner, H.No.22,Samrudhi Kanakadasa road,Ishwarya layout.Kuvempunagara N block,Mysore-22. | u/s 15 of Solid waste manaement rule, 2016, Punishable u/s.15 & 19 of EP act,1986 | EP Act | JMFC,Kodagu | Pending |
| 71 | 2021 | 12-07-2021 | CC.662/2021 | The Commissioner, CMC-Kolar,Near Old Bus stand,Kolar-563 101 | u/s.19 of EP: act,1986 | EP Act | JMFC Kolar | Pending |
| 72 | 2021 | 12-03-2021 | PCR.63/2021 | Town Municipal Copuncil,Karkala Taluk,Udupi District. | u/15 r/w 19 of EP Act | EP Act | Prl Civil Judge,JMFC Karkala | Pending |

-5

Fax: 080 25586321
E-mail: ...

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
Karnataka State Pollution Control Board

Parisara Bhavana
4th & 5th Floor, # 49, Church Street,
Bangalore 560 001, Karnataka, INDIA

NO KSPCB/CCS/2007-08/ 2061 Date 12.12.07

OFFICE MEMORANDUM

Sub: Levying administrative Charges on industries and other organizations-reg
Ref: 168[th] Board meeting held on 13-11-2007

---0---

As per the provisions of the Water Act, the Air Act and the Environmental Impact Assessment notification 2006, no person can establish an industry or project without the prior consent/environmental clearance. But in many cases Board has found that project proponent would have started constructions either prior to receipt of consent/environmental clearance or while such applications are under process.

The subject was discussed in 168[th] Board Meeting held on 13-11-2007 for imposing penalty in the form of administrative charges against such industries for commencing construction either prior to receipt of consent/Environmental clearance or while such applications are under process and where there are no serious environmental concerns and also no purpose would be served either by stopping the activity or prosecuting the occupier of the industry/organization.

The Board after detailed discussion accorded approval for collecting charges for such violations as noted above, at the rate of five times of the consent fee, if it is volunteered by project proponent.

MEMBER SECRETARY.

To,

1. CEO
2. SEO-1, 2, 3 & 4
3. Chief Administrative Officer
4. Chief Accounts Officer
5. EO-17 Category, EO-CFE (non EIA), EO-CFE (construction Projects), EO-HelpDesk, EO-CFO (SEO-2), EO-CFO (SEO-4), EO-TG Halli, EO-Complaint Cell, EO-Corporate Cell.
6. DEO - Corporate Cell, DEO-SEO-2, DEO- SEO-4, DEO-Constructions.
7. Regional Officer, Regional Office- Bangalore city-1, Bangalore city-2, Bangalore City-3 Bangalore East-1, Bangalore East-2, Bangalore-North-1, Bangalore North-2 Bangalore-South-1, Bangalore-South-2, Bangalore West, Peenya, Belguam, Bijapur, Bidar, Bagalkot, Bellary, Chitradurga, Chamarajnagar, Chickmagalore, Dharwad, Davangere, Gulbarga, Hassan, Karwar, Kolar, Koppal, Mandya, Mysore, Mangalore, Raichur, Shimoga, Tumkur, Udupi
8. Help Desk
9. PA to Chairman for information
10. PA to Member Secretary for information.
11. Master file

1448
26/12/07

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ" AVOID USE OF PLASTICS - BE 'ECO' FRIENDLY

Annexure - 6

ಫ್ಯಾಕ್ಸ್ / Fax : 080-25586321
ಇಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

☎ 25581383, 2558
25588151, 2558
25588142, 2558

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ : ಕರಾಮಾನಿಮಂ/198 ನೇ ಮಂ.ಸ/ನಿ.ಕೋ/2015-16/ 1967 ದಿನಾಂಕ : 4.7.2015

<u>ಜ್ಞಾಪನಾ ಪತ್ರ</u>

ವಿಷಯ : ದಿನಾಂಕ : 08.06.2015 ರಂದು ನಡೆದ 198 ನೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯ ನಡವಳಿ.

---*---

ದಿನಾಂಕ : 08.06.2015 ರಂದು ನಡೆದ 198 ನೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯ ನಡವಳಿಯ ಉದ್ಧರಣ (Extract) ನ್ನು ಈ ಕೆಳಗೆ ಪುನರ್ ರೂಪಿಸಲಾಗಿದೆ. ಇದರ ಬಗ್ಗೆ 15 ದಿನಗಳೊಳಗೆ ಸೂಕ್ತ ಕ್ರಮ ಜರುಗಿಸಿ ವರದಿ ಮಾಡಲು ಸೂಚಿಸಲಾಗಿದೆ.

ಈ ವಿಷಯದ ಬಗ್ಗೆ ತೆಗೆದುಕೊಂಡ ಓಂಪಾಲನ ಕ್ರಮದ ಪ್ರತಿಯನ್ನು (ಪತ್ರಗಳು/ಮುಚ್ಚುವ ಆದೇಶ/ನಿರ್ದೇಶನಗಳು/ಜ್ಞಾಪನಾ ಪತ್ರ/ಸುತ್ತೋಲೆಗಳು) ನಿಗಮಿತ ಕೋಶಕ್ಕೆ ಕಳುಹಿಸತಕ್ಕದ್ದು.

**198:01:** ದಿನಾಂಕ: 26.03.2015 ರಂದು ನಡೆದ 197ನೇ ಮಂಡಳ ಸಭೆ ನಡವಳಯನ್ನು ಓದಿ ಅನುಮೋದಿಸುವುದು.

*****

197ನೇ ಮಂಡಳಿ ಸಭೆಯ ವಿಷಯ ಸಂಖ್ಯೆ.197:02 ರಡಿಯಲ್ಲಿನ ಕ್ರಮ ಸಂಖ್ಯೆ. 195:11. Prescribing consent validity period for large and red category industries/organization to reduce paper work ವಿಷಯವನ್ನು ಮಂಡಳಿಯು ಮತ್ತೊಮ್ಮೆ ಅವಲೋಕಿಸಿತು. ಈ ಸಂದರ್ಭದಲ್ಲಿ ಮಂಡಳಿಯ ಸದಸ್ಯರಾದ ಶ್ರೀ.ಜೆ.ಬಿ.ಕಾವೇರಿಯಪ್ಪ, ಶ್ರೀ.ಮೋಹನಕುಮಾರ್ ಕೊಂಡಜ್ಜಿ ಮತ್ತು ಡಾ.ಜೈ ಪ್ರಕಾಶ್ ಆಳ್ವ ಇವರುಗಳು ಸಲ್ಲಿಸಿದ್ದ ಪತ್ರಗಳನ್ನು ಪರಿಶೀಲಿಸಲಾಯಿತು. ಮಾನ್ಯ ಸದಸ್ಯರುಗಳು ತಮ್ಮ ಪತ್ರದಲ್ಲಿ ಭಾರಿ ಪ್ರಮಾಣದ ಕೆಂಪು ಪ್ರವರ್ಗದ ಕಾರ್ಖಾನೆಗಳಿಗೆ ಐದು ವರ್ಷಗಳ ಕಾಲಾವಧಿಗೆ ಸಮ್ಮತಿ ನೀಡುವುದನ್ನು ಆಕ್ಷೇಪಿಸಿ ಹೀಗೆ ಧೀರ್ಘಕಾಲದ ಪರವಾನಿಗೆಯನ್ನು ನೀಡುವುದರಿಂದ ಕಾರ್ಖಾನೆಗಳ ಮಾಲಿನ್ಯ ನಿಯಂತ್ರಣ ಹತೋಟಿ ತಪ್ಪುವುದಾಗಿಯೂ, ಇದರಿಂದ "Pay and pollute" ಗೆ ಆಸ್ಪದ ನೀಡಿದಂತಾಗುವುದೆಂದು ಹಾಗು ಮಂಡಳಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ಣಯದಂತೆ ಇಂತಹ ಮಾಲಿನ್ಯಕಾರಕ ಕೆಂಪು ಪ್ರವರ್ಗದ ಕೈಗಾರಿಕೆಗಳು ನಿರಂತರ ಮಾಪನ ಉಪಕರಣಗಳನ್ನು ಅಳವಡಿಸುವುದು ಕಡ್ಡಾಯವಾಗಿದ್ದಾಗ್ಯೂ, ಈ ವ್ಯವಸ್ಥೆ ಇನ್ನು ವ್ಯವಸ್ಥಿತವಾಗಿಲ್ಲದ ಕಾರಣ ಹಾಗು ಕ್ಷೇತ್ರ ಮಟ್ಟದ ಅಧಿಕಾರಿಗಳ ಅಭಿಪ್ರಾಯ ಪಡೆಯುವುದು ಸೂಕ್ತವೆಂದು ಭಾವಿಸಿ ಹಿಂದಿನ

ನಿರ್ಣಯವನ್ನು ಹಿಂಪಡೆಯುವಂತೆ ಆಗ್ರಹಿಸಿರುವುದನ್ನು ಮಂಡಳಿಯು ಕೂಲಂಕುಶವಾಗಿ ಚರ್ಚಿಸಿತು. ಮುಂದುವರೆದಂತೆ, ಡಾ.ಜೈಪ್ರಕಾಶ್ ಆಳ್ವ, ಸದಸ್ಯರು Federal Mogul Ltd., ಕಾರ್ಖಾನೆಯನ್ನು ಉದಾಹರಣೆಯಾಗಿ ಉಲ್ಲೇಖಿಸಿ ಇಂತಹ ಕಾರ್ಖಾನೆಗಳು ಮಂಡಳಿಯ ಸಮ್ಮತಿಯಿಲ್ಲದೆಯೇ ಎರಡು ವರ್ಷಗಳಿಗೂ ಅಧಿಕ ಸಮಯದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ಐದು ವರ್ಷಗಳ ಅವಧಿಗೆ ಸಮ್ಮತಿ ನೀಡಿದಲ್ಲಿ ಇಂತಹ ಕಾರ್ಖಾನೆಗಳಿಂದ ಹೊರ ಬರುವ ಮಾಲಿನ್ಯಕ್ಕೆ ಕಡಿವಾಣ ಹಾಕಲು ದುಸ್ತರವಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷರು, ಕರಾಮಾನಿಮಂ, ಇವರು ಕೆಂಪು ಪ್ರವರ್ಗದ ಕಾರ್ಖಾನೆಗಳಿಗೆ ಐದು ವರ್ಷದ ಕಾಲಾವಧಿಯ ಸಮ್ಮತಿ ಪತ್ರ ನೀಡುವುದರಿಂದ ಉದ್ದಿಮೆಗಳಿಗೆ ಷರತ್ತುಗಳು ನಿರಂತರವಾಗಿರುವುದರಿಂದ ಮಂಡಳಿಯ ಅಧಿಕಾರಿಗಳು ಮಾಪನಕ್ಕೆ ಹೆಚ್ಚು ಸಮಯ ನೀಡಬಹುದೆಂದು, ತಪ್ಪಿತಸ್ಥ ಉದ್ದಿಮೆಗಳಿಗೆ ಈ ಸಮ್ಮತಿ ಅವಧಿಯಲ್ಲಿ ಕಾನೂನು ರೀತಿಯ ಕ್ರಮಗಳನ್ನು ಜರುಗಿಸಲು ಯಾವುದೇ ತೊಡಕುಗಳಿಲ್ಲವೆಂದು ಹಾಗು ಈ ಒಂದು ನಿರ್ಣಯವು ಕೇಂದ್ರ ಸರ್ಕಾರದ "Ease of Doing Business" ನಿಟ್ಟಿನಲ್ಲಿರುವುದಾಗಿ ತಿಳಿಸಿದರು. ಮುಂದುವರೆಯುತ್ತಾ, ತಾನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ ಸಮ್ಮತಿ ಸರಳೀಕರಣ ಸಂಬಂಧ ರಚಿಸಿರುವ ಕಾರ್ಯಪಡೆಯ ಅಧ್ಯಕ್ಷರಾಗಿ ಇಲ್ಲಿ ವಿವಿಧ ಮಾಲಿನ್ಯ ನಿಯಂತ್ರಣ ಮಂಡಳಿಗಳ ಅಭಿಪ್ರಾಯದ ಮೇರೆಗೆ ಶಿಫಾರಸ್ಸು ಮಾಡಿರುವ ಅಂಶಗಳಲ್ಲಿ ಐದು ವರ್ಷದ ಕಾಲಾವಧಿಯ ಸಮ್ಮತಿಯೂ ಸಹ ಸೇರಿರುವುದಾಗಿ ಮತ್ತು ಇತ್ತೀಚೆಗಷ್ಟೇ ನಡೆದ ರಾಜ್ಯ ಪರಿಸರ ಮಂತ್ರಿಗಳ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ/ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳ ಸಮ್ಮೇಳನದಲ್ಲೂ ಸಹ ಈ ನಿರ್ಣಯ ಅಂಗೀಕಾರವಾಗಿರುವುದಾಗಿ ಮಂಡಳಿಯ ಗಮನಕ್ಕೆ ತಂದರು.

ಮಂಡಳಿಯ ಸದಸ್ಯರಾದ ಶ್ರೀ.ಪಿ.ಮಣ್ಣಿವಣ್ಣನ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರು ತಮ್ಮ ಗೈರು ಹಾಜರಿಯಲ್ಲಿ ಸದರಿ ವಿಷಯದ ಬಗ್ಗೆ, ಐದು ವರ್ಷಗಳ ಕಾಲಾವಧಿಗೆ ಸಮ್ಮತಿ ನೀಡುವ ಬಗ್ಗೆ ಸಕಾರಾತ್ಮಕ ಅಭಿಪ್ರಾಯವನ್ನು ಲಿಖಿತವಾಗಿ ಕಳುಹಿಸಿರುವುದನ್ನು ಮಂಡಳಿಯು ಗಮನಿಸಿತು.

ಸರ್ಕಾರದ ಕಾರ್ಯದರ್ಶಿಗಳು, ಅಪಜೀ ಇಲಾಖೆ ಇವರು ಈ ಕೆಂಪು ಪ್ರವರ್ಗದ ಕಾರ್ಖಾನೆಗಳಿಗೆ ಐದು ವರ್ಷದ ಕಾಲಾವಧಿಯ ಸಮ್ಮತಿ ಪತ್ರ ನೀಡುವುದು ಸಮರ್ಥನೀಯವಾಗಿದ್ದರೂ ಸಹ ಸರ್ಕಾರಕ್ಕೆ ಈ ನಿರ್ಣಯದ ಬಗ್ಗೆ ಆಕ್ಷೇಪಣೆಗಳು ಬಂದಿರುವ ಹಿನ್ನಲೆಯಲ್ಲಿ ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಮಂಡಳಿಯಿಂದ ವರದಿಯನ್ನು ಕೇಳಿರುವುದರಿಂದ ಸರ್ಕಾರವು ಇದನ್ನು ಪರಿಶೀಲಿಸಿ ನಿರ್ಣಯಿಸುವುದಾಗಿ ಸಭೆಗೆ ತಿಳಿಸಿದರು.

ಮಂಡಳಿಯು ದೀರ್ಘವಾಗಿ ವಿಷಯವನ್ನು ಚರ್ಚಿಸಿ, 195ನೇ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಹಿಂಪಡೆದು ಕೆಳಕಂಡಂತೆ ನಿರ್ಣಯಿಸಿದೆ;

195ನೇ ಮಂಡಳ ಸಭೆಯ ವಿಷಯ ಸಂಖ್ಯೆ: 195:11 ಅನ್ನು ಕೆಳಕಂಡಂತೆ ಮಾರ್ಪಾಡಿಸಲಾಗಿದೆ. ಜಲ ಕಾಯ್ದೆ, 1974 ಹಾಗು ವಾಯು ಕಾಯ್ದೆ, 1981 ರಡಿಯಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೆಂಪು ಪ್ರವರ್ಗದ ಕೈಗಾರಿಕೆಗಳಿಗೆ ಸಮ್ಮತಿಯ ಅವಧಿಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಲು ನಿರ್ಣಯಿಸಿತು.

ಮಂಡಳಿಯು 195ನೇ ಸಭೆಯ ನಿರ್ಣಯದಂತೆ ಈಗಾಗಲೇ ದಿನಾಂಕ: 17.3.2015 ರಂದು ಹೊರಡಿಸಿರುವ ಅಧಿಸೂಚನೆಯಂತೆ ಕೆಂಪು ಪ್ರವರ್ಗದ ಬೃಹತ್/ಮಧ್ಯಮ ಪ್ರಮಾಣದ ಉದ್ದಿಮೆಗಳು ಐದು ವರ್ಷಗಳ ಕಾಲಾವಧಿಗೆ ಸಮ್ಮತಿ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಹೆಚ್ಚುವರಿ ಶುಲ್ಕವನ್ನು ಹಿಂಪಾವತಿಸಲು ನಿರ್ಣಯಿಸಿತು.

ಮುಂದುವರೆದಂತೆ, ದಿನಾಂಕ: 26.03.2015 ರಂದು ನಡೆದ 197ನೇ ಮಂಡಳಿ ಸಭೆ ನಡವಳಿಯನ್ನು ಮಂಡಳಿ ಅನುಮೋದಿಸಿತು.

ವಿಷಯ ಸಂಖ್ಯೆ: 197:11: **Withdrawal of administrative charges levied to Industries/Organizations.**

The resolution is modified as under:

The Board approved to withdraw the 167th & 168th Board meeting resolution regarding levying of administrative charges for revocation of the closure order issued to the industry/organization under the Water Act and the Air Act: and for starting the construction activity prior to the receipt of consent/ environmental clearance.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ